**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ 080-22224212

**No.**DPAR 08 CHUVISA (MC) 2023 **Date:** 30.04.2023

# ಪತ್ರಿಕಾ ಪ್ರಕಟಣೆ

**1. ಗೈರು ಹಾಜರಿ ಮತದಾರರಿಗೆ ಮನೆಯಲ್ಲಿ ಮತದಾನ:**

ನಿನ್ನೆ **31,119** 80+ ವರ್ಷ ಮೇಲ್ಪಟ್ಟ ಮತ್ತು ವಿಶೇಷ ಚೇತನ ಮತದಾರರು ತಮ್ಮ ಮನೆಯಲ್ಲಿ ಮತ ಚಲಾಯಿಸಿದ್ದಾರೆ.

ಇಂದು ಇದಕ್ಕಾಗಿ **1,270** ತಂಡಗಳು **1,270** ಮಾರ್ಗಗಳಲ್ಲಿ ಸಂಚರಿಸಲಿವೆ. 20,049 ಮತದಾರರು ಮನೆಗಳಲ್ಲಿ 80+ ವರ್ಷ ಮೇಲ್ಪಟ್ಟ ಮತ್ತು ವಿಶೇಷ ಚೇತನರು ಮತ ಚಲಾಯಿಸಿದ್ದಾರೆ.

**2. ಮಾದರಿ ನೀತಿ ಸಂಹಿತೆ ಚುನಾವಣಾ ವೆಚ್ಚ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ:**

ಚುನಾವಣೆಯ ವಿವಿಧ ಜಾಗೃತ ದಳಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ, ಚುನಾವಣಾ ವೆಚ್ಚ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಉಲ್ಲಂಘಿಸಿರುವ ಕುರಿತು ದಿನಾಂಕ 29.03.2023 ರಿಂದ ಇಲ್ಲಿಯವರೆಗೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಲಾಗಿದೆ.

**ಅ. ವಶಪಡಿಸಿಕೊಂಡ ಸಂಚಿತ ವಿವರ: 30.04.2023:**

| **ನಗದು** | | | |
|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 1,14,15,220 | 90,17,36,347 | |
| ಆದಾಯ ತೆರಿಗೆ ಇಲಾಖೆ | - | 20,11,70,290 | |
| **ಒಟ್ಟು** | **1,14,15,220** | **1,10,29,06,637** | |
| **ಉಚಿತ ಕೊಡುಗೆಗಳು** | | | |
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 13,95,500 | 22,28,33,032 | |

| ಮದ್ಯ | | | | |
|---|---|---|---|---|
| ಕಾರ್ಯಚರಣೆ ತಂಡಗಳು | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಲೀಟರ್) | ಮೌಲ್ಯ (ರೂ) | ಪ್ರಮಾಣ (ಲೀಟರ್ | ಮೌಲ್ಯ (ರೂ) |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 1127.40 | 1,81,009 | 60,059.56 | 1,33,57,148.28 |
| ಅಬಕಾರಿ ಇಲಾಖೆ | 44,649.00 | 1,17,96,523 | 18,96,463.20 | 72,56,26,079.00 |
| **ಒಟ್ಟು** | **45,776.40** | **1,19,77,532** | **19,56,522.756** | **73,89,83,227** |

| ಡ್ರಗ್ಸ್/ಮಾದಕ ದ್ರವ್ಯಗಳು | | | | |
|---|---|---|---|---|
| ಕಾರ್ಯಚರಣೆ ತಂಡಗಳು | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ | ಪ್ರಮಾಣ (ಕೆ.ಜಿ) | ಮೌಲ್ಯ (ರೂ |
| **ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು** | 14.09 | 13,81,500 | 1,452.75 | 18,43,75,826.00 |

| ಬೆಲೆ ಬಾಳುವ ಲೋಹಗಳು | | | | |
|---|---|---|---|---|
| ಕಾರ್ಯಚರಣೆ ತಂಡಗಳು | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ) | ಪ್ರಮಾಣ (ಕೆ.ಜಿ) | ಮೌಲ್ಯ (ರೂ) |
| ಬಂಗಾರ ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು) | 0 | - | 123.19 | 62,05,49,533.00 |
| ಬಂಗಾರ (ಆದಾಯ ತೆರಿಗೆ ಇಲಾಖೆ) | 0.00 | - | 26.23 | 13,99,68,687.00 |
| **ಒಟ್ಟು ಬಂಗಾರ** | **0.00** | **-** | **149.42** | **76,05,18,220** |
| ಬೆಳ್ಳಿ (ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು) | 5.84 | 3,50,000 | 606.93 | 4,20,28,276.40 |
| ಬೆಳ್ಳಿ ಆದಾಯ ತೆರಿಗೆ ಇಲಾಖೆ | 0.00 | - | 36.85 | 27,31,000.00 |
| **ಒಟ್ಟು ಬೆಳ್ಳಿ** | **5.84** | **3,50,000** | **643.78** | **4,47,59,276** |
| **ಒಟ್ಟು ಬಂಗಾರ, ಬೆಳ್ಳಿ** | **5.84** | **3,50,000** | **793.20** | **80,52,77,496** |

| | |
|---|---|
| ನಿನ್ನೆ ದಿನ ವಶಕ್ಕೆ ಪಡೆದ ಸಂಚಿತ *(ಮೌಲ್ಯ ರೂ.)* | **2,65,19,752** |
| ವಶಕ್ಕೆ ಪಡೆದ ಒಟ್ಟು ಸಂಚಿತ *(ಮೌಲ್ಯ ರೂ.)* | **305,43,76,219** |

**ಆ. ಪ್ರಕರಣ ದಾಖಲು:**

- ನಗದು, ಮದ್ಯ, ಮಾದಕ ದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆ ವಸ್ತುಗಳನ್ನು ವಶಪಡಿಸಿಕೊಂಡಿರುವ ವಿಚಕ್ಷಣ ದಳ, ಸ್ಥಿರ ಕಣ್ಗಾವಲು ತಂಡಗಳು ಮತ್ತು ಪೊಲೀಸ್ ಅಧಿಕಾರಿಗಳು **2,346** ಪ್ರಥಮ ತನಿಖಾ ವರದಿ (FIR) ದಾಖಲಿಸಿದ್ದಾರೆ.
- ಚುನಾವಣೆ ಘೋಷಣೆಯಾದ ದಿನಾಂಕದಿಂದ ಇಲ್ಲಿಯವರೆಗೆ ಒಟ್ಟಾರೆ **69,822** ಶಸ್ತ್ರಾಸ್ತ್ರಗಳನ್ನು ಜಮೆ ಮಾಡಿಸಿಕೊಳ್ಳಲಾಗಿದೆ, **18** ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. **20** ಶಸ್ತ್ರಾಸ್ತ್ರಗಳ ಪರವಾನಿಗೆ ರದ್ದು ಪಡಿಸಲಾಗಿದೆ. ಸಿಆರ್‌ಪಿಸಿ ಕಾಯ್ದೆಯಡಿ **5,504** ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ **10,069** ವ್ಯಕ್ತಿಗಳಿಂದ ಮುಚ್ಚಳಿಕೆ ಪತ್ರ ಪಡೆಯಲಾಗಿದೆ. ಚುನಾವಣೆ ಘೋಷಣೆಯಾದ ದಿನದಿಂದ ಇಲ್ಲಿಯವರೆಗೆ **15,422** ಜಾಮೀನು ರಹಿತ ವಾರೆಂಟ್‌ಗಳನ್ನು ಜಾರಿಗೊಳಿಸಲಾಗಿದೆ.
- ಅಬಕಾರಿ ಇಲಾಖೆಯು **3,031** ಗಂಭೀರ ಪ್ರಕರಣಗಳನ್ನು ಹಾಗೂ **2,797** ಮದ್ಯದ ಪರವಾನಿಗೆ ಉಲ್ಲಂಘಿಸಿದ ಪ್ರಕರಣಗಳು, **90** ಎನ್‌ಡಿಪಿಎಸ್ ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ ಒಟ್ಟು **25,993** ಪ್ರಕರಣಗಳನ್ನು ದಾಖಲಿಸಿದೆ ಮತ್ತು **2080** ವಿವಿಧ ಮಾದರಿಯ ವಾಹನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

**ಇ. ವಿಶೇಷ ವರದಿ:**

- ➢ ವಿಚಕ್ಷಣ ದಳವು ಯಾದಗಿರಿ ಜಿಲ್ಲೆಯ ಯಾದಗಿರಿ ವಿಧಾನಸಭಾ ಕ್ಷೇತ್ರದಲ್ಲಿ ರೂ. **50,00,000** ನಗದು ವಶಪಡಿಸಿಕೊಂಡಿದೆ.
- ➢ ಸ್ಥಿರ ಕಣ್ಗಾವಲು ಪಡೆ ಧಾರವಾಡ ಜಿಲ್ಲೆಯ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ರೂ. **25,00,000** ನಗದು ವಶಪಡಿಸಿಕೊಂಡಿದೆ.

**2. ಸಾರ್ವಜನಿಕ ಕುಂದುಕೊರತೆಗಳ ಇತ್ಯರ್ಥ:**

ಮತದಾರರ ಸಹಾಯವಾಣಿ ಮೂಲಕ ಸ್ವೀಕರಿಸಲಾದ **21,764** ಕರೆಗಳಲ್ಲಿ **20,977** ಸಾರ್ವಜನಿಕರು ಮಾಹಿತಿ ಕೋರಿದ್ದಾರೆ. **34** ಜನರು ಪ್ರತಿಕ್ರಿಯೆ (ಫೀಡ್‌ಬ್ಯಾಕ್) ನೀಡಿದ್ದಾರೆ. **37** ಜನರು ಸಲಹೆಗಳನ್ನು ನೀಡಿದ್ದಾರೆ ಮತ್ತು **716** ಜನರು ದೂರುಗಳನ್ನು ದಾಖಲಿಸಿದ್ದಾರೆ. ಕರೆಗಳ ಮೂಲಕ ಸ್ವೀಕರಿಸಿದ ಎಲ್ಲಾ **21,764** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ಇದಲ್ಲದೇ ಎನ್‌ಜಿಆರ್‌ಎಸ್ ಪೋರ್ಟ್‌ನಲ್ಲಿ **9,090**

ದೂರುಗಳನ್ನು ನಾಗರಿಕರು ನೋಂದಾಯಿಸಿದ್ದು ಇವುಗಳಲ್ಲಿ **8,803** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ.

**3. ಸಿ–ವಿಜಿಲ್:**

ಸಿ–ವಿಜಿಲ್ ಅಪ್ಲೀಕೇಷನ್ ಮೂಲಕ **10,852** ದೂರು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪರವಾನಿಗೆ ಇಲ್ಲದ ಪೋಸ್ಟರ್/ಬ್ಯಾನರ್ ಅಂಟಿಸಿದ ಪ್ರಕರಣಗಳು **6,152** ಹಣ ಹಂಚಿಕೆ ಪ್ರಕರಣಗಳು **104,** ಕಡ್ಡಾಯವಾಗಿ ಮಾಡಬೇಕಾದಲ್ಲದ ಪೋಸ್ಟರ್ ಪ್ರಕರಣಗಳು **187,** ಬಂದೂಕುಗಳ ಪ್ರದರ್ಶಿಸಿ ಬೆದರಿಸಿದ ಪ್ರಕರಣಗಳು **63,** ಉಡುಗೊರೆ, ಕೂಪನ್ ಹಂಚಿಕೆ ಪ್ರಕರಣಗಳು **93,** ಮದ್ಯ ಹಂಚಿಕೆ ಪ್ರಕರಣಗಳು **81,** ಆಸ್ತಿ ಹಾನಿಗೊಳಿಸಿದ ಪ್ರಕರಣಗಳು **402,** ಪರವಾನಿಗೆ ಇಲ್ಲದ ವಾಹನ ಅಥವಾ ಬೆಂಗಾವಲು ಪಡೆ ಪ್ರಕರಣಗಳು **163,** ದಾಖಲಾಗಿದ್ದು, ಈ ಪೈಕಿ **9,772** ದೂರುಗಳು ನಿಜವೆಂದು ಕಂಡುಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

**4. ಮಾಧ್ಯಮ:**

ವಿವಿಧ ಮಾಧ್ಯಮಗಳ ಮೂಲಕ ದೂರುಗಳನ್ನು ಸ್ವೀಕರಿಸಲಾಗಿದ್ದು, ಇಮೇಲ್ ಮೂಲಕ **357** ಮತ್ತು ಪತ್ರಗಳ ಮೂಲಕ **628** ಸುದ್ದಿಪತ್ರಿಕೆಗಳಿಂದ **147,** ಟಿ.ವಿ ಚಾನಲ್‌ಗಳಿಂದ **60** ಮತ್ತು ಸಾಮಾಜಿಕ ಜಾಲತಾಣಗಳಿಂದ **82** ಸೇರಿದಂತೆ ಒಟ್ಟು **1,274** ದೂರುಗಳು ಬಂದಿದ್ದು **1,057** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

**5. ಸುವಿಧಾ:**

ಸುವಿಧಾ ಅಡಿಯಲ್ಲಿ ವಿವಿಧ ಅನುಮತಿಗಳನ್ನು ಕೋರಿ ಇವರೆಗೆ ಒಟ್ಟು **17,752** ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ **14,835** ಅರ್ಜಿಗಳಿಗೆ ಅನುಮತಿ ನೀಡಲಾಗಿದ್ದು, **1,884** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅವುಗಳಲ್ಲಿ **133** ಅರ್ಜಿಗಳು ಪ್ರಗತಿಯಲ್ಲಿವೆ. **547** ಬಾಕಿ ಉಳಿದಿದ್ದು, **353** ಅರ್ಜಿಗಳು ರದ್ದಾಗಿರುತ್ತವೆ.

******